**ಸಾಕ್ಷಿಯನ್ನು ಕರೆಯಿಸಿ ಸತ್ಯ ಭೋದನೆ ಮಾಡಿ ಪ್ರಮಾಣೀಕರಿಸಿದ ದಿನಾಂಕ 12.08.2024.**

**ಮುಂದುವರೆದ ಪಾಟೀ ಸವಾಲು : ಶ್ರೀ ಟಿ.ಕೆ.ವಿ. 2 ನೇ ಪ್ರತಿವಾದಿ ಪರ ವಕೀಲರಿಂದ**

3 ನೇ ಪ್ರತಿವಾದಿ ನನ್ನ ತಂದೆ. ನನ್ನ ತಂದೆಯ ಹೆಸರಿನಲ್ಲಿ ಸ್ವತ್ತುಗಳು ಇರುವ ಬಗ್ಗೆ ನನ್ನ ಗಮನದಲ್ಲಿಲ್ಲ. 2004 ರಲ್ಲಿ ನನ್ನ ತಂದೆ ತಿಪ್ಪಗಾನಹಳ್ಳಿ ಗ್ರಾಮದ ಗೌರಮ್ಮರವರಿಂದ ಸ.ನಂ.71/3 ರ ಸ್ವತ್ತನ್ನು ಕ್ರಯಕ್ಕೆ ಪಡೆದಿದ್ದರು ಎಂದರೆ ನಾನು ಆಗ ಚಿಕ್ಕವನಿದ್ದೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸದರಿ ನನ್ನ ತಂದೆ ಖರೀದಿಸಿದ ಸ.ನಂ.71/3 ರ ಸ್ವತ್ತು ನಿಮ್ಮ ಕುಟುಂಬಕ್ಕೆ ಸೇರಿದೆಯಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ.

ಈ ಹಂತದಲ್ಲಿ ಸಾಕ್ಷಿಗೆ ದಿನಾಂಕ 04.11.2004 ರ ಒಂದು ನೋಂದಾಯಿತ ಕ್ರಯಪತ್ರದ ದೃಢೀಕೃತ ಪ್ರತಿಯನ್ನು ತೋರಿಸಿ , ಓದಿ ಹೇಳಿ, ಅದರಲ್ಲಿ ಬರೆದಿರುವ ಹನುಮಂತಪ್ಪರವರ ಮಗ ಹೆಚ್. ರವಿಕುಮಾರ್ ಯಾರು ಎಂದಾಗ ಸಾಕ್ಷಿಯು ಅವರು ನನ್ನ ತಂದೆ ಎಂದು ನುಡಿಯುತ್ತಾರೆ. ಆದುದರಿಂದ ಸದರಿ ದಾಖಲೆಯನ್ನು **ನಿಡಿ-1** ಎಂದು ಗುರುತಿಸಲಾಯಿತು. ನಿಡಿ-1 ಆಧಾರದ ಮೇಲೆ ಸ.ನಂ.71/3 ರ ಸ್ವತ್ತಿನ ಪಹಣಿ ನನ್ನ ತಂದೆಯ ಹೆಸರಿನಲ್ಲಿದೆ ಎಂದರೆ ಸರಿಯಲ್ಲ. ಈ ಹಂತದಲ್ಲಿ ಸಾಕ್ಷಿಗೆ 2024-25 ನೇ ಸಾಲಿನ ಸ.ನಂ.71/3 ರ ಒಂದು ಗಣಕೀಕೃತ ಪಹಣಿಯನ್ನು ತೋರಿಸಿ , ಓದಿ ಹೇಳಿ, ಅದರಲ್ಲಿ ಬರೆದಿರುವ ಹನುಮಂತಪ್ಪರವರ ಮಗ ಹೆಚ್. ರವಿಕುಮಾರ್ ಯಾರು ಎಂದಾಗ ಸಾಕ್ಷಿಯು ಅವರು ನನ್ನ ತಂದೆ ಎಂದು ನುಡಿಯುತ್ತಾರೆ. ಸದರಿ ಪಹಣಿಯನ್ನು **ನಿಡಿ-2** ಎಂದು ಗುರುತಿಸಲಾಯಿತು.

ಈ ಹಂತದಲ್ಲಿ ಸಾಕ್ಷಿಗೆ 2024-25 ನೇ ಸಾಲಿನ ಸ.ನಂ.182/4 ಬಿ ವಿಸ್ತೀರ್ಣ 18 ಗುಂಟೆ ಸ್ವತ್ತಿಗೆ ಸಂಬಂಧಪಟ್ಟ ಒಂದು ಗಣಕೀಕೃತ ಪಹಣಿಯನ್ನು ತೋರಿಸಿ , ಓದಿ ಹೇಳಿ, ಅದರಲ್ಲಿ ಬರೆದಿರುವ ಹನುಮಂತಪ್ಪರವರ ಮಗ ಹೆಚ್. ರವಿಕುಮಾರ್ ಯಾರು ಎಂದಾಗ ಸಾಕ್ಷಿಯು ಅವರು ನನ್ನ ತಂದೆ ಎಂದು ನುಡಿಯುತ್ತಾರೆ. ಸದರಿ ಪಹಣಿಯನ್ನು **ನಿಡಿ-3** ಎಂದು ಗುರುತಿಸಲಾಯಿತು.

ಈ ಹಂತದಲ್ಲಿ ಸಾಕ್ಷಿಗೆ 2024-25 ನೇ ಸಾಲಿನ ಸ.ನಂ.71/1 ವಿಸ್ತೀರ್ಣ 37 ಗುಂಟೆ ಸ್ವತ್ತಿಗೆ ಸಂಬಂಧಪಟ್ಟ ಒಂದು ಗಣಕೀಕೃತ ಪಹಣಿಯನ್ನು ತೋರಿಸಿ , ಓದಿ ಹೇಳಿ, ಅದರಲ್ಲಿ ಬರೆದಿರುವ ಹನುಮಂತಪ್ಪರವರ ಮಗ ಹೆಚ್. ರವಿಕುಮಾರ್, ನಲ್ಲಕ್ಕ, ದಾಸಪ್ಪ, ಚಿಕ್ಕಗೋವಿಂದಪ್ಪ, ವೆಂಕಟರಮಣಪ್ಪ ಹಾಗೂ ಗಂಗಮ್ಮ ರವರ ಜಂಟಿ ಹೆಸರಿನಲ್ಲಿ ಪಹಣಿ ಇದ್ದು, ಸದರಿ ಹನುಮಂತಪ್ಪರವರ ಮಗ ಹೆಚ್. ರವಿಕುಮಾರ್, ಯಾರು ಎಂದಾಗ ಸಾಕ್ಷಿಯು ಅವರು ನನ್ನ ತಂದೆ ಎಂದು ನುಡಿಯುತ್ತಾರೆ. ಸದರಿ ಪಹಣಿಯನ್ನು **ನಿಡಿ-4** ಎಂದು ಗುರುತಿಸಲಾಯಿತು.

ಮೇಲೆ ಹೇಳಿದ ನಿಡಿ-2 ರಿಂದ 4 ರ ಪಹಣಿಯಲ್ಲಿ ಕಂಡುಬರುವ ಸ್ವತ್ತುಗಳನ್ನು ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸಾಕ್ಷಿಯು ನಾನು ಅಜ್ಜಿಯ ಪಿತ್ರಾರ್ಜಿತ ಸ್ವತ್ತುಗಳ ಮೇಲೆ ದಾವೆ ಸಲ್ಲಿಸಿದ್ದೇನೆ ಮತ್ತು ತಂದೆಯ ಆಸ್ತಿಗಳ ಮೇಲೆ ದಾವೆ ಸಲ್ಲಿಸಿಲ್ಲ ಎಂದು ನುಡಿಯುತ್ತಾರೆ.

ನಾನು ನನ್ನ ತಂದೆ 3 ನೇ ಪ್ರತಿವಾದಿಯ ಮೇಲೆ ಯಾವುದೇ ಪರಿಹಾರ ಕೇಳಿ ದಾವೆ ಸಲ್ಲಿಸಿಲ್ಲ. ಸ.ನಂ.56/2 ರ ಮೇಲೆ ಗಂಗಾಧರಪ್ಪರವರು ಜಿ. ರಮೇಶ/ಪ್ರತಿವಾದಿ 2(ಬಿ) ರವರಿಗೆ ದಿನಾಂಕ 17.07.2014 ನೋಂದಾಯಿತ ದಾನಪತ್ರದ ಮೂಲಕ ಸ್ವತ್ತನ್ನು ನೀಡಿದ್ದಾರೆ ಎಂದರೆ ಸರಿಯಲ್ಲ. ಆ ರೀತಿ ದಾನಪತ್ರ ಆಗಿರುವ ಬಗ್ಗೆ ನನಗೆ ಮಾಹಿತಿ ಇಲ್ಲ ಎಂದು

ನುಡಿಯುತ್ತಾರೆ. ನಾನು ದಾನಪತ್ರದ ವಿಚಾರವನ್ನು ಹಾಗೂ ನಿಡಿ-2 ರಿಂದ 4 ರಂತೆ ನನ್ನ ತಂದೆಯ ಹೆಸರಿನಲ್ಲಿ ಸ್ವತ್ತುಗಳಿರುವ ವಿಚಾರವನ್ನು ಉದ್ದೇಶಪೂರಿತವಾಗಿ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸರಿಯಲ್ಲ. ದಾನಪತ್ರವನ್ನು ದಾವೆಯಲ್ಲಿ ಪ್ರಶ್ನಿಸಿಲ್ಲ ಎಂದರೆ ಅದರ ಬಗ್ಗೆ ನನಗೆ ಮಾಹಿತಿ ಇಲ್ಲ ಎಂದು ನುಡಿಯುತ್ತಾರೆ ಹಾಗೂ ನನ್ನ ಅಜ್ಜಿ ಮತ್ತು ನನ್ನ ತಂದೆ ದಾನಪತ್ರದ ಬಗ್ಗೆ ನನಗೆ ತಿಳಿಸಿಲ್ಲ ಎಂದು ನುಡಿಯುತ್ತಾರೆ. ಪ್ರತಿವಾದಿ 2(ಎ) ಮತ್ತು (ಬಿ) ರವರ ಸ್ವತ್ತಿಗೂ ನನಗೂ ಸಂಬಂಧವಿಲ್ಲ ಹಾಗೂ ಅವರನ್ನು ಅನಾವಶ್ಯಕವಾಗಿ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿದ್ದೇವೆ ಎಂದರೆ ಸರಿಯಲ್ಲ.

4 ನೇ ಪ್ರತಿವಾದಿಗೂ ಸಹ ದಾವಾ ಸ್ವತ್ತುಗಳಲ್ಲಿ ಭಾಗಾಂಶ ನೀಡಬೇಕೆಂದು ನುಡಿಯುತ್ತಾರೆ. 4 ನೇ ಪ್ರತಿವಾದಿ ನನ್ನ ಸೋದರ ಅತ್ತೆ ಎಂದು ನುಡಿಯುತ್ತಾರೆ. ನಿಡಿ-2 ರಿಂದ 4 ರ ಪಹಣಿಯಲ್ಲಿರುವ ಸ್ವತ್ತುಗಳ ಮೇಲೆ ನನ್ನ ತಂದೆ ಬ್ಯಾಂಕಿನಿಂದ ಸಾಲ ಮಾಡಿದ್ದಾರೆ ಎಂದರೆ ಅವರು ಮಾಡಿರುವ ಸಾಲಕ್ಕೂ ನನಗೂ ಸಂಬಂಧವಿಲ್ಲ ಎಂದು ನುಡಿಯುತ್ತಾರೆ. ನನ್ನ ತಂದೆ ಮಾಡಿದ ಸಾಲಕ್ಕೆ ನಾನು ಭದ್ರತೆಗಾರನಾಗಿ ಸಹಿ ಮಾಡಿದ್ದೇನೆ ಎಂದರೆ ಸರಿ. ಸಾಕ್ಷಿಯು ಸ್ವತಃ ಮನೆಯಲ್ಲಿ ಹಸುಗಳು ಮೃತವಾಗಿದ್ದವು, ಆದುದರಿಂದ ಕಷ್ಟ ಇದ್ದುದರಿಂದ ಸಾಲ ಪಡೆಯಲು ನಾನು ಶ್ಯೂರಿಟಿಯಾಗಿದ್ದೆ ಎಂದು ನುಡಿಯುತ್ತಾರೆ. ಸಾಕ್ಷಿಯು ನಾನು ಮತ್ತು ನನ್ನ ತಂದೆ ಬೇರೆ ಬೇಟೆಯಾಗಿ ಸುಮಾರು 15 ವರ್ಷಗಳಾಗಿರುತ್ತವೆ ಎಂದು ನುಡಿಯುತ್ತಾರೆ. ನನ್ನ ಪದವಿ ವ್ಯಾಸಂಗದವರೆವಿಗೆ ನನ್ನ ಖರ್ಚುಗಳನ್ನು ನನ್ನ ತಂದೆ ನೋಡಿಕೊಂಡಿದ್ದಾರೆ ಎಂದು ನುಡಿಯುತ್ತಾರೆ. ದಾವೆಯನ್ನು ನನ್ನ ತಂದೆ ಮತ್ತು ನನ್ನ ಅತ್ತೆ ಭಾಗಾಂಶ ಬೇಕಿದ್ದರೆ ಸಲ್ಲಿಸಬೇಕಾಗಿತ್ತು, ಆದರೆ ನನ್ನ ತಂದೆ, ನನ್ನ ಅತ್ತೆ ಮತ್ತು ನಾನು ಶಾಮೀಲಾಗಿ ಈ ದಾವೆಯನ್ನು ಸಲ್ಲಿಸಿದ್ದೇವೆ ಎಂದರೆ ಸರಿಯಲ್ಲ. ಆ ಒಂದು ಕಾರಣಕ್ಕಾಗಿ ನಿಪಿ-2 ವಂಶವೃಕ್ಷದ ಪ್ರಮಾಣಪತ್ರಕ್ಕೆ

ಅಸಲು ದಾವಾ ಸಂ: 242/2014

ಪಿ.ಡಬ್ಲ್ಯು:1

ನನ್ನ ತಂದೆ ಸಹಿ ಮಾಡಿದ್ದಾರೆ ಎಂದರೆ ಸರಿ. ನನಗೆ ಯಾವುದೇ ಭಾಗಾಂಶ ಇಲ್ಲದಿದ್ದರೂ ಸಹ ಸುಳ್ಳು ಸಂಬಂಧಗಳನ್ನು ಸೃಷ್ಟಿ ಮಾಡಿ, ಪ್ರತಿವಾದಿಗಳ ಸ್ವತ್ತನ್ನು ಕಬಳಿಸಲು ಈ ಸುಳ್ಳು ದಾವೆಯನ್ನು ಹೂಡಿದ್ದೇನೆ ಎಂದರೆ ಸರಿಯಲ್ಲ. ನನ್ನ ತಂದೆ ಯಾವುದೇ ಹಿಂದಿನ ವಿಲೇಗೊಂಡ ದಾವೆಗಳ ಬಗ್ಗೆ ನನ್ನ ಬಳಿ ಚರ್ಚಿಸಿಲ್ಲ. ನಾನು ಆ ದಾವೆಗಳ ಬಗ್ಗೆ ತಿಳಿದುಕೊಂಡಿಲ್ಲ. ನಾನು ಹಾಗೂ ನನ್ನ ತಂದೆ ಈಗಲೂ ಜೊತೆಯಲ್ಲಿ ವಾಸವಿದ್ದೇವೆ, ಕುಟುಂಬದ ಪಡಿತರ ಚೀಟಿ ನಮ್ಮಗಳ ಜಂಟಿ ಹೆಸರಿನಲ್ಲಿದ್ದು, ಒಂದೇ ಮನೆಯಲ್ಲಿ ವಾಸವಿದ್ದೇವೆ ಎಂದರೆ ಸರಿಯಲ್ಲ. ನಾನು ಮತ್ತು ನನ್ನ ತಂದೆ ಒಟ್ಟಾಗಿ ಸಾಲ ಮಾಡಿದ್ದೇವೆ ಎಂದರೆ ನನ್ನ ತಂದೆ ಮಾತ್ರ ಸಾಲ ಪಡೆದಿದ್ದಾರೆ ಎಂದು ನುಡಿಯುತ್ತಾರೆ. ನಾನು ಪ್ರತ್ಯೇಕ ಪಡಿತರ ಚೀಟಿ ಪಡೆದು 7 ವರ್ಷಗಳು ಆಗಿರುತ್ತವೆ. ಅದನ್ನು ಮುಂದಿನ ದಿನಾಂಕದಂದು ಹಾಜರುಪಡಿಸುತ್ತೇನೆ. ನನ್ನ ತಂದೆಯೂ ಸಹ ಪ್ರತ್ಯೇಕ ಪಡಿತರ ಚೀಟಿಯನ್ನು ಪಡೆದಿದ್ದಾರೆ ಎಂದು ನುಡಿಯುತ್ತಾರೆ.

**<u>ಮರುವಿಚಾರಣೆ ಇಲ್ಲ</u>.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

ಓ ಹೇ ಕೇ ಸ ಇದೆ

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಗೌರಿಬಿದನೂರು.